ಕರ್ನಾಟಕ ವಿಧಾನ ಪರಿಷತ್

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1460(1696)
2	ಸದಸ್ಯರ ಹೆಸರು	ಶ್ರೀ ಎಂ. ನಾರಾಯಣಸ್ವಾಮಿ
3	ಉತ್ತರಿಸಬೇಕಾದ ದಿನಾಂಕ	23/03/2020
4	ಉತ್ತರಿಸಬೇಕಾದ ಸಚಿವರು	ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
1.	ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ಖಾಯಂ ಪೂರ್ವ ಪರೀಕ್ಷೆ ಘೋಷಣೆಯಾಗದೆ ಬೋಧಕರಿಗೆ ಪದೋನ್ನತಿ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ಈ ಕೆಳಕಂಡ ಬೋಧಕ ಸಿಬ್ಬಂದಿಗಳಿಗೆ ಭಾರತೀಯ ವೈದ್ಯಕೀಯ ಪರಿಷತ್ತಿನ ತಪಾಸಣೆಯ ಸಂದರ್ಭದಲ್ಲಿ ಪರಿಷತ್ತಿನ ಮಾನದಂಡದಂತೆ ಕೊರತೆ ನಿವಾರಿಸಲು ಖಾಯಂ ಪೂರ್ವ ಅವಧಿ ಘೋಷಣೆಯಾಗದೆ ಪದೋನ್ನತಿಯನ್ನು ನೀಡಲಾಗಿರುತ್ತದೆ. 1) ಡಾ. ನರೇನ ನಿಂಬಾಳ ಇವರು ಮೆಡಿಸಿನ್ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ದಿನಾಂಕ: 01-04-2008 ರಲ್ಲಿ ನೇಮಕಾತಿ ಹೊಂದಿದ್ದು ಇವರಿಗೆ ದಿನಾಂಕ: 01-10-2008 ರಿಂದ ಅನ್ವಯವಾಗುವಂತೆ ಸಹಾಯಕ ಪ್ರಾಧ್ಯಾಪಕರ ಹುದ್ದೆಯಿಂದ ಸಹ ಪ್ರಾಧ್ಯಾಪಕರ ಹುದ್ದೆಗೆ ಪದೋನ್ನತಿ ನೀಡಲಾಗಿದೆ. ಇವರ 2 ವರ್ಷಗಳ ಖಾಯಂಪೂರ್ವ ಸೇವಾ ಅವಧಿಯನ್ನು ದಿನಾಂಕ: 31-03-2010 ರಂದು ತೃಪ್ತಿಕರವಾಗಿ ಪೂರೈಸಿರುವದಾಗಿ ಘೋಷಣೆ ಮಾಡಲಾಗಿರುತ್ತದೆ. ಇವರಿಗೆ ಸಹ ಪ್ರಾಧ್ಯಾಪಕರ ಹುದ್ದೆಗೆ ನೀಡಲಾಗಿರುವ ಪದೋನ್ನತಿಯನ್ನು ದಿನಾಂಕ: 23-04-2010 ರಂದು ಜರುಗಿದ ಸಂಸ್ಥೆಯ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಿ ಘಟನೋತ್ತರ ಅನುಮೋದನೆ ಪಡೆಯಲಾಗಿದೆ. 2) ಡಾ. ವಿನಯ ಬಿ. ದಾಸ್ತಿಕೊಪ, ಇವರು ದಿನಾಂಕ: 30-03-2010 ರಂದು ಆಪ್ತಲ್ಮಾಲಜಿ ವಿಭಾಗದಲ್ಲಿ ಸಹ ಪ್ರಾಧ್ಯಾಪಕರ ಹುದ್ದೆಗೆ ನೇಮಕಾತಿ ಹೊಂದಿದ್ದು ಇವರಿಗೆ ದಿನಾಂಕ: 05-02-2011 ರಿಂದ ಅನ್ವಯವಾಗುವಂತೆ ಸಹ ಪ್ರಾಧ್ಯಾಪಕರ ಹುದ್ದೆಯಿಂದ ಪ್ರಾಧ್ಯಾಪಕರ ಹುದ್ದೆಗೆ ಪದೋನ್ನತಿ ನೀಡಲಾಗಿದೆ. ಇವರ 2 ವರ್ಷಗಳ ಖಾಯಂಪೂರ್ವ ಸೇವಾ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿರುವದಾಗಿ ದಿನಾಂಕ: 17-01-2019 ರಂದು ಘೋಷಿಸಲಾಗಿದ್ದು, ದಿನಾಂಕ: 03-03-2013 ರಿಂದ ಅನ್ವಯವಾಗುವಂತೆ ಪ್ರಾಧ್ಯಾಪಕರ ಹುದ್ದೆಗೆ ಪದೋನ್ನತಿ ನೀಡಲಾಗಿದೆ. 3) ಡಾ. ಗಿರೀಶ ದಂಡಗಿ ಇವರು ದಿನಾಂಕ: 18-03-2010 ರಂದು ಕ್ಷಯರೋಗ ಮತ್ತು ಎದೆ ರೋಗಗಳ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ನೇಮಕಾತಿ ಹೊಂದಿದ್ದು ಇವರಿಗೆ ದಿನಾಂಕ: 02-08-2011 ರಲ್ಲಿ ದಿನಾಂಕ: 05-02-2011 ರಿಂದ ಅನ್ವಯವಾಗುವಂತೆ ಸಹಾಯಕ ಪ್ರಾಧ್ಯಾಪಕರ ಹುದ್ದೆಯಿಂದ ಸಹ ಪ್ರಾಧ್ಯಾಪಕರ ಹುದ್ದೆಗೆ ಪದೋನ್ನತಿ ನೀಡಲಾಗಿದೆ. ಖಾಯಂಪೂರ್ವ ಸೇವಾ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿರುವುದಾಗಿ ದಿನಾಂಕ: 17-03-2012 ರಂದು ಘೋಷಿಸಿದೆ. ಡಾ. ವಿನಯ ಬಿ. ದಾಸ್ತಿಕೊಪ, ಸಹ ಪ್ರಾಧ್ಯಾಪಕರು, ಆಪ್ತಲ್ಮಾಲಜಿ ವಿಭಾಗ ಮತ್ತು ಡಾ. ಗಿರೀಶ ದಂಡಗಿ, ಸಹಾಯಕ ಪ್ರಾಧ್ಯಾಪಕರು, ಕ್ಷಯರೋಗ ಮತ್ತು ಎದೆ ರೋಗಗಳ ವಿಭಾಗ ಇವರುಗಳಿಗೆ ಕ್ರಮವಾಗಿ ಪ್ರಾಧ್ಯಾಪಕರು ಮತ್ತು ಸಹ ಪ್ರಾಧ್ಯಾಪಕರಾಗಿ ನೀಡಲಾದ ಮುಂಬಡ್ತಿಯನ್ನು ದಿನಾಂಕ 24/05/2012 ರಂದು ನಡೆದ ಸಂಸ್ಥೆಯ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಿ ಘಟನೋತ್ತರ ಅನುಮೋದನೆಯನ್ನು ಪಡೆಯಲಾಗಿದೆ.

2.	ಬೆಳಗಾವಿ ವೈದ್ಯಕೀಯ ಸಂಸ್ಥೆಯಲ್ಲಿ ಇಲಾಖೆಯ ಪ್ರಧಾನ ಕಾರ್ಯದರ್ಶಿ, ಮಾನ್ಯ ಸಚಿವರ ಅನುಮೋದನೆ ಇಲ್ಲದೆ, ಪದೋನ್ನತಿ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿನ ಎಲ್ಲಾ ಬೋಧಕ ಸಿಬ್ಬಂದಿಗಳಿಗೆ ಸಂಸ್ಥೆಯ ಆಡಳಿತ ಮಂಡಳಿಯ ಅಧ್ಯಕ್ಷರಾದ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಮತ್ತು ಸಂಸ್ಥೆಯ ಆಡಳಿತ ಮಂಡಳಿಯ ಉಪಾಧ್ಯಕ್ಷರಾದ, ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಅನುಮೋದನೆಯೊಂದಿಗೆ ಪದೋನ್ನತಿಯನ್ನು ನೀಡಲಾಗಿದೆ.
3.	ಬಂದಿದ್ದರೆ, ಸರ್ಕಾರ ಕೈಗೊಂಡ ಕ್ರಮಗಳೇನು? (ಸಂಪೂರ್ಣ ವಿವರ ನೀಡುವುದು)	

ಸಂಖ್ಯೆ: ಎಂಇಡಿ 57 ಕೆವಿಎಂ 2020

(ಡಾ|| ಕೆ. ಸುಧಾಕರ್)
ವೈದ್ಯಕೀಯ ಶಿಕ್ಷಣ ಸಚಿವರು